# ದಿನಾಂಕ:13-01-2017ರಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು ಮತ್ತು ತಾಲ್ಲೂಕು ಎಂ.ಐ.ಎಸ್.ಸಂಯೋಜಕರ ಸಭೆಯ ಪ್ರಗತಿ ಪರಿಶೀಲನಾ ಸಭೆಯ ನಡವಳಿ

*****

ಹಾಜರಿದ್ದವರು:

1) ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿ.ಪಂ. ತುಮಕೂರು
2) ತಾಲ್ಲೂಕು ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು ಮತ್ತು ತಾಲ್ಲೂಕು ಎಂ.ಐ.ಎಸ್.ಸಂಯೋಜಕರು (ಹಾಜರಾತಿ ವಹಿಯಲ್ಲಿರುವಂತೆ)

***

ಸಭೆಯ ಪ್ರಾರಂಭದಲ್ಲಿ ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಿ.ಪಂ. ತುಮಕೂರು ರವರು ಸಭೆಯಲ್ಲಿ ಹಾಜರಿದ್ದ ಮಹಾತ್ಮಗಾಂಧಿ ನರೇಗಾ ಕಾರ್ಯಕ್ರಮದ ಅಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ತಾಲ್ಲೂಕು ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು ಮತ್ತು ತಾಲ್ಲೂಕು ಎಂ.ಐ.ಎಸ್.ಸಂಯೋಜಕರುಗಳನ್ನು ಸಭೆಗೆ ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಜಿಲ್ಲೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಏಪ್ರಿಲ್ 2016ರಿಂದ ಇದುವರೆಗೂ ತಯಾರಿಸಿದ ಅಂದಾಜುಪಟ್ಟಿಗಳು (ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಿರುವ ಮಾಹಿತಿ ಒಳಗೊಂಡಂತೆ); ತಾಂತ್ರಿಕ ಮಂಜೂರಾತಿ ನೀಡಿರುವ ಕಾಮಗಾರಿಗಳ ಸಂಖ್ಯೆ, ಚೆಕ್‌ಮೆಸರ್‌ಮೆಂಟ್ ಮಾಡಿರುವ ಕಾಮಗಾರಿಗಳ ಸಂಖ್ಯೆ, ಜಿ.ಪಂ.ನಿಂದ ನಿಗಧಿಪಡಿಸಿರುವ ನಮೂನೆಯಲ್ಲಿ ವರ್ಗವಾರು/ಕಾಮಗಾರಿವಾರು/ಗ್ರಾಮ ಪಂಚಾಯತಿವಾರು ಮಾಹಿತಿ (ತಾಲ್ಲೂಕು ಸಂಯೋಜಕರಿಂದ); ಜಿ.ಪಿ.ಎಸ್. ಮಾಡಿದ ಕಾಮಗಾರಿಗಳ ಸಂಖ್ಯೆ (2015-16 & 2016-17); 2016-17ನೇ ಸಾಲಿನಲ್ಲಿ ಸ್ಥಳ ಪರಿವೀಕ್ಷಣೆ ಮಾಡಿದ ಕಾಮಗಾರಿಗಳ ಸಂಖ್ಯೆ; ಇದುವರೆಗೂ ಸಲ್ಲಿಸಲಾಗಿರುವ ಗ್ರಾಮ ಪಂಚಾಯತಿಗಳ ಪರಿವೀಕ್ಷಣಾ ವರದಿ ಕುರಿತು; ಇದುವರೆಗೂ ಅಂತಿಮ ಬಿಲ್ ಪಾವತಿಸಬೇಕಾಗಿರುವ ಕಾಮಗಾರಿಗಳ ಸಂಖ್ಯೆ; ಮುಕ್ತಾಯವಾಗಿರುವ ಕಾಮಗಾರಿಗಳ ಸಂಖ್ಯೆ; ಆಗಸ್ಟ್ ಮಾಹೆಯಲ್ಲಿ ಸೃಜಿಸಲಾಗಿರುವ ಮಾನವ ದಿನಗಳು; ಮಾನ್ಯ ಮುಖ್ಯ ಮಂತ್ರಿಗಳ 21 ಅಂಶದ ಕಾರ್ಯಕ್ರಮದ ಪ್ರಗತಿ ವರದಿಗಳು; ಆಗಸ್ಟ್ ಮಾಹೆಯ ದಿನಚರಿ ಮತ್ತು ಹಾಜರಾತಿ (ನಿಗಧಿಪಡಿಸಿದ ನಮೂನೆಯಲ್ಲಿ); ಸಾಮಾಜಿಕ ಪರಿಶೋಧನಾ ಗ್ರಾಮಸಭೆಗೆ ಹಾಜರಾದ ಗ್ರಾಮ ಪಂಚಾಯತಿಗಳ ಸಂಖ್ಯೆ (ತಾಂತ್ರಿಕ ಸಂಯೋಜಕರು/ತಾಂತ್ರಿಕ ಸಹಾಯಕರು) ಮಾಹಿತಿಯನ್ನು ಸಭೆಯಲ್ಲಿ ವಿವರಿಸುವಂತೆ ಹಾಜರಿದ್ದ ತಾಲ್ಲೂಕು ತಾಂತ್ರಿಕ ಸಂಯೋಜಕರು, ಸಹಾಯಕರು ಮತ್ತು ತಾಲ್ಲೂಕು ಎಂ.ಐ.ಎಸ್.ಸಂಯೋಜಕರುಗಳಿಗೆ ತಿಳಿಸಿದರು. ಅದರಂತೆ ತಾಲ್ಲೂಕು ತಾಂತ್ರಿಕ ಸಂಯೋಜಕರು ತಾಲ್ಲೂಕುವಾರು ಸಭೆಗೆ ಮಾಹಿತಿ ನೀಡಿದರು.

Mailed 3-2-17

ನರೇಗಾ ಯೋಜನೆಯ ಅಡಿಯಲ್ಲಿ ಯೋಜನೆಯ ಮಾರ್ಗಸೂಚಿಯಲ್ಲಿನ ವಿವರವಾದ ಮಾಹಿತಿಯನ್ನು ನೀಡಿ, ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ತಾಂತ್ರಿಕ ಸಿಬ್ಬಂದಿ ಅನುಸರಿಸಬೇಕಾದ ಕ್ರಮಗಳನ್ನು ಸಹ ವಿವರಿಸಲಾಯಿತು.

- ಏಪ್ರಿಲ್ ಮಾಹೆಯಲ್ಲಿ ಯಾವ ರೀತಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗಿರುತ್ತದೆ; ತಾವು ಎಷ್ಟು ಕಾಮಗಾರಿಗಳ ಅಂದಾಜುಪಟ್ಟಿ ಸಿದ್ಧಪಡಿಸಲಾಗಿದೆ, ಎಷ್ಟು ಎಂ.ಬಿ. ಬರೆಯಲಾಗಿದೆ, ಎಷ್ಟು ಸ್ಥಳ ಪರಿಶೀಲನೆ ಮಾಡಲಾಗಿದೆ, ಎಷ್ಟು ಮಾನವದಿನ ಸೃಜನೆ ಮಾಡಲಾಗಿದೆ ಎಂಬುದರ ಬಗ್ಗೆ ತಾವುಗಳು ಪ್ರತಿ ವಾರ ತಮ್ಮ ಪ್ರಗತಿಯ ವರದಿಯನ್ನು ಜಿ.ಪಂ.ಗೆ ಸಲ್ಲಿಸಲು ಸೂಚಿಸಿದರು. ಸಮುದಾಯಾಧಾರಿತ ಕಾಮಗಾರಿಗನ್ನು ಮೊದಲು ಜಿ.ಪಿ.ಎಸ್. ಮಾಡಬೇಕು, ಅಂದಾಜುಪಟ್ಟಿ ಅನುಮೋದನೆ ಆದ ಮೇಲೆ ಮಾರ್ಕ್‌ಔಟ್ ಕೊಡಲಾಗುತ್ತಿದೆ, ರೂ.3.00ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ತಾಂತ್ರಿಕ ಮಂಜೂರಾತಿ ನೀಡುತ್ತಾರೆ; ಹೊರಗುತ್ತಿಗೆ ತಾಂತ್ರಿಕ ಸಹಾಯಕರು ತಯಾರಿಸುವ ಅಂದಾಜುಪಟ್ಟಿಗಳನ್ನು ರ್‍ಯಾಂಡಂ ಆಗಿ ತಾವು ಚೆಕ್ ಮಾಡಬೇಕು; ಅಂದಾಜುಪಟ್ಟಿಯನ್ನು ಎ.ಇ.ಇ. ಪಂ.ರಾ.ಇಂ.ರವರು ಪರಿಶೀಲಿಸಿ ಜಿ.ಪಂ.ಗೆ ವರದಿ ನೀಡಬೇಕು; ಈ ವರ್ಷದಲ್ಲಿ ಶೇ.10ರಷ್ಟು ಅಂದಾಜುಪಟ್ಟಿಗಳನ್ನಾದರೂ ಪರಿಶೀಲನೆ ಮಾಡಿರುವ ಬಗ್ಗೆ ವರದಿ ನೀಡುವಂತೆ ತಿಳಿಸಿದರು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್/ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಇಲಾಖೆ)**

ಕಾಮಗಾರಿ ಪ್ರಾರಂಭವಾದ ಕೂಡಲೇ ಎನ್.ಎಂ.ಆರ್. ತೆಗೆಯಬೇಕು, ಇಲ್ಲದಿದ್ದರೆ ಅದು Delay Paymentಗೆ ಬರುತ್ತದೆ; ಕೆಲಸ ಎಷ್ಟು ಆಗಿರುತ್ತದೋ ಅಷ್ಟಕ್ಕೆ ಎಂ.ಬಿ. ಬರೆಯಬೇಕು; ಕೆಲವರು ಕಾಮಗಾರಿ ಪೂರ್ಣಗೊಂಡಿದ್ದರು ಎಂ.ಬಿ.ಬರೆಯುವುದಿಲ್ಲ 8 ದಿವಸದೊಳಗೆ ಎಂ.ಬಿ. ಎನ್.ಎಂ.ಆರ್. ವೇಜ್‌ಲಿಸ್ಟ್ ಸಿದ್ಧಪಡಿಸಬೇಕು ಎಂದು ತಿಳಿಸಲಾಯಿತು. ಎಲ್ಲಾ ತಾಂತ್ರಿಕ ಸಂಯೋಜಕರು/ಸಹಾಯಕರು. ಯಾವುದೇ ಕಾಮಗಾರಿಯ ಕಾಂಕ್ರಿಟ್ ಹಾಕುವ ಸಮಯದಲ್ಲಿ ಖುದ್ದು ಇಂಜಿನಿಯರ್, ತಾಂತ್ರಿಕ ಸಹಾಯಕರು/ತಾಂತ್ರಿಕ ಸಂಯೋಜಕರು ಹಾಜರಿದ್ದು ಸರಿಯಾದ ಪ್ರಮಾಣದಲ್ಲಿ ಕಾಂಕ್ರಿಟ್ ಹಾಕುವಂತೆ ತಿಳಿಸಬೇಕು, ಒಮ್ಮೆ ಸರಿಯಾಗಿ ಕಾಂಕ್ರಿಟ್ ಕೆಲಸ ಮಾಡಿ ನೀರು ನಿಲ್ಲಲು ಪಾತಿ ಕಟ್ಟಿ, ಅಂದರೆ ಕ್ಯೂರಿಂಗ್ ಮಾಡುವುದಕ್ಕೆ ಸಹಕಾರಿಯಾಗಿರಬೇಕು, (ಉದಾ: ಆರ್.ಸಿ.ಸಿ., ಕಣ, ರಸ್ತೆ ಕಾಮಗಾರಿ) ಕನಿಷ್ಠಪಕ್ಷ 21ದಿವಸವಾದರೂ ಕ್ಯೂರಿಂಗ್ ಮಾಡಬೇಕು; ಗುಣಮಟ್ಟದ ಕಾಮಗಾರಿಯಾಗಬೇಕು; ಬಿರುಕು(Crack) ಬಂದಲ್ಲಿ ತಮ್ಮಿಂದಲೇ ವಸೂಲು ಮಾಡಲಾಗುವುದು; ಸಾಮಗ್ರಿಗಳು ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಶೇಖರಿಸಲಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು; Thickness ಕಡಿಮೆಯಾದರೆ ವಸೂಲಾತಿ ಮಾಡಲಾಗುತ್ತದೆ; ತಾಂತ್ರಿಕ ಸಂಯೋಜಕರು ಪ್ರಮಾಣ, ಪರಿಮಾಣದ ಬಗ್ಗೆ ಕಡ್ಡಾಯವಾಗಿ ಪರಿಶೀಲಿಸಬೇಕು; ಅದರಲ್ಲೂ ರಸ್ತೆ, ಕಣ, ಕಟ್ಟಡ, ಗೋಡೌನ್ ಕಾಮಗಾರಿಗಳ ನಿರ್ಮಾಣ ತಳಪಾಯ ಕಾರ್ಯದಲ್ಲಿ 10 ಸೆಂಮಿ. ಕೂಪಿಂಗ್ ಕಾಂಕ್ರಿಟ್ ಹಾಕಿರಲೇ ಬೇಕು ಎಂದು ತಿಳಿಸಲಾಯಿತು. ಮುಂದುವರೆದು ಸಾಮಗ್ರಿ ಬಿಲ್ ಮಾಡಬೇಕಾದರೆ ರೂ.1.00ಲಕ್ಷದವರೆಗೆ ಮಾತ್ರ ಕೊಟೇಷನ್ ಕರೆದು ಮಾಡಬೇಕು; ಸಿಮೆಂಟ್ ಬಿಲ್‌ನಲ್ಲಿ ಟಿನ್ ನಂ. & ಪ್ರಿಟೆಂಡ್ ಬಿಲ್ ಆಗಿರಬೇಕು, ಸಾಮಗ್ರಿ ಸರಬರಾಜುದಾರರು ಅಂತಲೇ ತೆಗೆದುಕೊಳ್ಳಬೇಕು, ಗುತ್ತಿದಾರರು ಎಂದು ತೆಗೆದುಕೊಳ್ಳಬಾರದು; ಇ.ಓ.ರವರು ಅನುಮೋದಿತ ಕ್ರಿಯಾ ಯೋಜನೆಯ ಪ್ರತಿ ನೀಡಬೇಕು, ಅದರಲ್ಲಿ ಪಿ.ಡಿ.ಓ. & ಅಧ್ಯಕ್ಷರ ಸಹಿ ಇರಬೇಕು, ನಂತರ end2end Loginನಲ್ಲಿ Pass ಆಗಿರಬೇಕು. ಪ್ರವಾಹ ನಿಯಂತ್ರಣ ತಡೆಗೋಡೆ ನಿರ್ಮಿಸುವಾಗ ಇ.ಓ. ಮತ್ತು ಎಇಇ ರವರು ಪರಿಶೀಲಿಸಿ, ಧೃಢೀಕರಿಸಿ ಅನುಷ್ಠಾನ ಮಾಡಬೇಕು; ಶಿರಾ & ಮಧುಗಿರಿ ತಾಲ್ಲೂಕುಗಳ ಕಾಮಗಾರಿಯ ಬಗ್ಗೆ

ಬಹಳಷ್ಟು ದೂರುಗಳು ಬಂದಿರುತ್ತದೆ; ಪಾವಗಡ & ಚಿ.ನಾ.ಹಳ್ಳಿ ತಾಲ್ಲೂಕುಗಳ ಕಾಮಗಾರಿಯ ಬಗ್ಗೆ ಭಾಗಶ: ದೂರುಗಳು ಬಂದಿರುತ್ತದೆ; ಮಾನ್ಯ ಮುಖ್ಯ ಮಂತ್ರಿಗಳ 21 ಅಂಶದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದು ಎಂದು ತಿಳಿಸಲಾಯಿತು.

ಯೋಜನಾ ಅಭಿಯಂತರರು, ಜಿ.ಪಂ.ತುಮಕೂರು ರವರು ನೌಕರರ ಪಿ.ಎಫ್.ಗೆ ಸಂಬಂಧಿಸಿದಂತೆ ವಿವರಗಳನ್ನು ಸಲ್ಲಿಸಲು ದಿನಾಂಕ:04-01-2017ರಂದು ನಮೂನೆಯನ್ನು ಕಳುಹಿಸಿಕೊಡಲಾಗಿದೆ; ಆ ನಮೂನೆಯ ಪ್ರಕಾರ ಮಾಹಿತಿ ಒದಗಿಸಲು ಸೂಚಿಸುತ್ತಾ, ಅಂದಿನಿಂದ ಇಲ್ಲಿಯವರೆಗೆ ಪಿ.ಎಫ್. ವಿವರವನ್ನು ಈ ದಿನವೇ ನೀಡಲು ತಿಳಿಸಿದರು. ಹಾಗೂ ತಾಲ್ಲೂಕುವಾರು ಮಾಹಿತಿಯನ್ನು ಪಡೆದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು 2013-14ನೇ ಸಾಲಿನಲ್ಲಿ ಕಾಮಗಾರಿಗಳನ್ನು ಪ್ರಾರಂಭವಾಗಿದ್ದು, ಕೆಲವು ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಈವರೆಗೂ ಸಾಮಗ್ರಿ ವೆಚ್ಚ ಪಾವತಿಯಾಗಿರುವುದಿಲ್ಲ; ಜಿಲ್ಲೆಯಲ್ಲಿ 59,000 ಕಾಮಗಾರಿಗಳು ಇವೆ; ಗ್ರಾಮ ಪಂಚಾಯತಿವಾರು 10 ದಿವಸದೊಳಗೆ ವಿವರ (Abstract) ನೀಡಲು ತಿಳಿಸಿದರು.

- ಕಾಮಗಾರಿಗಳ ಗುಚ್ಛದ ಪಟ್ಟಿಯನ್ನು ಪಿಡಿಒ ರವರು ಡೌನ್‌ಲೋಡ್ ಮಾಡಬೇಕು; ಅದರಲ್ಲಿ ಪಿಡಿಒ & ಅಧ್ಯಕ್ಷರ ಸಹಿಯಿರಬೇಕು, ನಂತರ ಇ.ಒ.ರವರು ಅನುಮೋದನೆ ನೀಡಬೇಕು; 15 ರಿಂದ 20 ಅವಶ್ಯಕ ಕಾಮಗಾರಿಗಳನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರಬೇಕು; ಒಂದು ತಿಂಗಳಾದರೂ ಇ.ಒ.ರವರು ಅನುಮೋದನೆ ನೀಡದಿದ್ದಲ್ಲಿ ಸಮುದಾಯಾಧಾರಿತ ಕಾಮಗಾರಿಗಳನ್ನು ಕಡ್ಡಾಯವಾಗಿ ಇ.ಒ.ರವರು ಅನುಮೋದನೆ ಮಾಡಬೇಕು ಎಂದು ತಿಳಿಸಲಾಯಿತು. ಇಂಗು ಗುಂಡಿ ನಿರ್ಮಾಣ ಮಾಡುವಾಗ ಬಹಳ ಜಾಗರೂಕತೆಯಿಂದ ಮಾಡಬೇಕು; ಪ್ರತಿ ಹಂತದಲ್ಲಿಯೂ ತಾವುಗಳಿರುವ ಛಾಯಚಿತ್ರ ಕಡ್ಡಾಯವಾಗಿ ಇರುವುದು ತಾಂತ್ರಿಕ ಸಹಾಯಕರ ಜವಾಬ್ದಾರಿಯಾಗಿರುತ್ತದೆ ಹಾಗೂ ಕಾಮಗಾರಿ ನಡೆಯುವ ಸ್ಥಳದಲ್ಲಿ ಹಾಜರಿರಬೇಕು; 6-7 ಹಂತದ ಕಾಮಗಾರಿಯ ಛಾಯಚಿತ್ರವಿರಬೇಕು; ಅಕ್ರಮ/ಅವ್ಯವಹಾರಕ್ಕೆ ಅವಕಾಶ ನೀಡಬಾರದು; **5 ಹಂತದ ಛಾಯಚಿತ್ರದೊಂದಿಗೆ ನನ್ನ ಸಮಕ್ಷಮ ಸದರಿ ಇಂಗುಗುಂಡಿಯನ್ನು ಫಿಲ್ ಮಾಡಿದೆ ಎಂದು ದೃಢೀಕರಿಸಿ ಬಿಲ್ ತಯಾರಿಸಬೇಕು ಎಂದು ತಿಳಿಸಲಾಯಿತು.**
- **ಕೃಷಿಹೊಂಡ ಸಿವಿಲ್ ಕಾಮಗಾರಿಯಾಗಿದ್ದು ತಾಂತ್ರಿಕ ಇಂಜಿನಿಯರ್ ಮಾಡಬೇಕು ಎಂದು ತಿಳಿಸಲಾಯಿತು. ಜಿಲ್ಲೆಯಲ್ಲಿ ಕೃಷಿ ಹೊಂಡದ ಪ್ರಗತಿಯು ಬಹಳ ಕುಂಠಿತವಾಗಿರುತ್ತದೆ; ಈ ಸಂಬಂಧ ಒಂದು ದಿನದ ಕಾರ್ಯಾಗಾರ ಮಾಡಿ, ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿಯಿಂದ ತರಬೇತಿ ನೀಡಲಾಗುವುದೆಂದು ತಿಳಿಸಲಾಯಿತು.**
- ಆಕ್ಟೋಬರ್ ಮಾಹೆಯಿಂದ ಪ್ರತಿಯೊಬ್ಬ ತಾಂತ್ರಿಕ ಇಂಜಿನಿಯರ್‌ಗೆ 5 ಗ್ರಾ.ಪಂ. ನಿಗಧಿಗೊಳಿಸಿ 5 ಕೃಷಿಹೊಂಡ ನಿರ್ಮಾಣ ಮಾಡಲು ಹಾಗೂ ರೂ.50,000/- ಘಟಕ ವೆಚ್ಚದ ಕೃಷಿ ಹೊಂಡ ಮಾಡುವಂತೆ ತಿಳಿಸಲಾಯಿತು. ಗ್ರಾ.ಪಂ. ಲಾಗಿನ್‌ನಿಂದ ಎನ್.ಎಂ.ಆರ್.ತೆಗೆದು ಕೃಷಿಹೊಂಡ ಅನುಷ್ಠಾನ ಮಾಡಬೇಕು ಎಂದು ತಿಳಿಸಲಾಯಿತು.
- ತಾಲ್ಲೂಕುವಾರು ಪ್ರಗತಿಯನ್ನು ಪರಿಶೀಲಿಸಲಾಯಿತು. ಕೃಷಿಹೊಂಡ ಮತ್ತು ಅಂಗನವಾಡಿ ನಿರ್ಮಾಣಕ್ಕೆ ಪ್ರಥಮ ಆಧ್ಯತೆ ನೀಡುವಂತೆ ತಪ್ಪಿದ್ದಲ್ಲಿ ಪಿ.ಡಿ.ಒ. ಮತ್ತು ತಾಂತ್ರಿಕ ಸಹಾಯಕರನ್ನೇ ನೇರಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಸಲಾಯಿತು.

ಮುಂದುವರೆದು ಅಂಗನವಾಡಿ ಕಟ್ಟಡ ಕಾಮಗಾರಿಗಳಿಗೆ ಪ್ರಥಮ ಆಧ್ಯತೆ ನೀಡಬೇಕು; ಗುಬ್ಬಿ, ತುಮಕೂರು & ಕುಣಿಗಲ್ ತಾಲ್ಲೂಕುಗಳ ಪ್ರಗತಿಯು ಬಹಳ ಕಡಿಮೆ ಪ್ರಗತಿಯಲ್ಲಿರುತ್ತದೆ; ಎಲ್ಲಾ ಅಂಗನವಾಡಿಗಳನ್ನು ಈ ಮಾಹೆಯಲ್ಲಿ ಪ್ರಾರಂಭ ಮಾಡಿ ಕೂಡಲೇ ಪೂರ್ಣಗೊಳಿಸಲು ತಿಳಿಸಲಾಯಿತು; ಎಲ್ಲೆಲ್ಲಿ ಸ್ಥಳದ ಸಮಸ್ಯೆ ಇದೆಯೋ ಬದಲಾವಣೆಗೆ ಪ್ರಸ್ತಾವನೆ ಕಳುಹಿಸಿಕೊಡಲು ತಿಳಿಸಲಾಯಿತು. ಇನ್ನೂ 450 ಅಂಗನವಾಡಿ ಕಟ್ಟಡಗಳ ಕಾಮಗಾರಿ ಪ್ರಾರಂಭವಾಗಬೇಕು; ಈವರೆಗೆ 86 ಅಂಗನವಾಡಿಗಳನ್ನು ಬದಲಾವಣೆ ಮಾಡಿ ಕಳುಹಿಸಿಕೊಡಲಾಗಿದೆ; 450 ಅಂಗನವಾಡಿ ಕಟ್ಟಡಗಳನ್ನು ಒಂದು ತಿಂಗಳೊಳಗಾಗಿ ಕಡ್ಡಾಯವಾಗಿ ಪೂರ್ಣಗೊಳಿಸಲು ತಿಳಿಸಲಾಯಿತು.

- ಜಿಯೋ ಟ್ಯಾಗಿಂಗ್ ಪ್ರಗತಿಯನ್ನು ತಾಲ್ಲೂಕುವಾರು ಪರಿಶೀಲಿಸಲಾಗಿ 2-3ದಿವಸದೊಳಗೆ ಪೂರ್ಣಗೊಳಿಸಬೇಕು; ಕೊರಟಗೆರೆ ತಾಲ್ಲೂಕಿನಲ್ಲಿ ಬಹಳ ಚೆನ್ನಾಗಿ ಆಗಿರುತ್ತದೆ ಶೇ.100% ಪ್ರಗತಿಯಾಗಿರುತ್ತದೆ; ಕೊರಟಗೆರೆ ಹೊರತುಪಡಿಸಿ ಉಳಿದ ತಾಲ್ಲೂಕುಗಳ ಶೇ.50% ಮಾತ್ರವಾಗಿರುತ್ತದೆ ಎಂದು ತಿಳಿಸುತ್ತಾ, ದಿನಾಂಕ:16-01-2017ರೊಳಗೆ ಎಲ್ಲವನ್ನೂ ಪೂರ್ಣಗೊಳಿಸಬೇಕು ಎಂದು ತಿಳಿಸಲಾಯಿತು. ಈ ಮಾಹೆಯ ಅಂತ್ಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಭೆ ಏರ್ಪಡಿಸಿದ್ದು, ಇಲಾಖಾವಾರು ಪ್ರಗತಿ ಪರಿಶೀಲನೆ ಮಾಡುವರು; ಪ್ರತಿ ದಿನ ಪ್ರಗತಿ ಪರಿಶೀಲಿಸಲಾಗುತ್ತದೆ; ಆದುದರಿಂದ ಸಮರೋಪಾದಿಯಲ್ಲಿ ಕಾರ್ಯೋನ್ಮುಖರಾಗಬೇಕು; ಯಾವ ಪಂಚಾಯತಿಯಲ್ಲಿ ಪಿ.ಡಿ.ಒ.ರವರು ನರೇಗಾದಡಿ ಸಮುದಾಯಾಧರಿತ ಕಾಮಗಾರಿಗಳನ್ನು ಮಾಡಲು ಸಹಕರಿಸುತ್ತಿಲ್ಲವೋ ಅಂತಹವರ ಮಾಹಿತಿಯನ್ನು ಲಿಖಿತವಾಗಿ ನೀಡುವಂತೆ ಎಲ್ಲಾ ತಾಂತ್ರಿಕ ಸಹಾಯಕರಿಗೆ ತಿಳಿಸಿದರು.
- ಒಬ್ಬ ತಾಂತ್ರಿಕ ಸಹಾಯಕರು ಒಂದು ತಿಂಗಳಲ್ಲಿ ಎಷ್ಟು ಅಂದಾಜುಪಟ್ಟಿ, ಎನ್.ಎಂ.ಆರ್. ಸ್ಥಳ ಪರಿಶೀಲನೆ, ಮಾನವದಿನ ಸೃಜನೆ, ಬಿಲ್ ತಯಾರಿಕೆ, ವೇಜ್‌ಲಿಸ್ಟ್ ಮಾಡಿರುತ್ತಾರೆ ಎಂಬ ಮಾಹಿತಿಯನ್ನು ಒಂದೇ ಹಾಳೆಯಲ್ಲಿ ಸಿದ್ದಪಡಿಸಿ ಈಗಾಗಲೇ ಸಲ್ಲಿಸಿರುವ ನಮೂನೆಯಲ್ಲಿ ಜಿ.ಪಂ.ಗೆ ಸಲ್ಲಿಸಬೇಕು.
- ಪ್ರತಿ ದಿನ ತಾವು ತಾಲ್ಲೂಕು ಪಂಚಾಯತಿಗೆ ಹೋಗಿ ಹಾಜರಾತಿ ಹಾಕಬೇಕು; ಅನಿವಾರ್ಯ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅದಿಕಾರಿ/ಸಹಾಯಕ ನಿರ್ದೇಶಕರ ಗಮನಕ್ಕೆ ತರಬೇಕು ಎಂದು ತಿಳಿಸಲಾಯಿತು.
- ಗೋಕಟ್ಟೆ ಮತ್ತು ಕೃಷಿಹೊಂಡ ಸಮಗ್ರ ಅಭಿವೃದ್ಧಿಯಾಗಬೇಕು; ತಾಲ್ಲೂಕುವಾರು ಪ್ರಗತಿಯನ್ನು ಪರಿಶೀಲಿಸಿ, ಪಾವಗಡ ತಾ:ನಲ್ಲಿ ಬಹಳ ಕಡಿಮೆ ಪ್ರಗತಿಯಾಗಿರುತ್ತದೆ; ಸಾಕಷ್ಟು ಸಿಬ್ಬಂದಿಗಳಿದ್ದರೂ ಪೇಮೆಂಟ್ ಸರಿಯಾಗಿ ಆಗುತ್ತಿಲ್ಲ; ಬಾಕಿ ಉಳಿಸಿಕೊಂಡಿರುವ ಕಾಮಗಾರಿಗಳ ಬಿಲ್ ಪಾವತಿಯನ್ನು 15ದಿವಸದೊಳಗೆ ಪಾವತಿಸಲು ತಿಳಿಸಲಾಯಿತು. ಜನವರಿ ಅಂತ್ಯದೊಳಗೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ 10-10 ಕೃಷಿ ಹೊಂಡ ನಿರ್ಮಾಣವಾಗಲೇ ಬೇಕು ಎಂದು ತಿಳಿಸಲಾಯಿತು.

**(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು/ತಾಂತ್ರಿಕ ಸಂಯೋಜಕರು/ತಾಂತ್ರಿಕ ಸಹಾಯಕರು )**

ಮುಂದುವರೆದು ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಜಿಲ್ಲೆಯಲ್ಲಿ ನರೇಗಾ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ಬಹಳಷ್ಟು ದೂರುಗಳು ಬಂದಿರುತ್ತವೆ; ಹೆಚ್ಚು ಸಮಸ್ಯೆಗಳು

ಕಂಡುಬಂದಿರುತ್ತದೆ; ಬಹಳಷ್ಟು ದೂರುಗಳು ಲೋಕಾಯುಕ್ತದಲ್ಲಿ ದಾಖಲಾಗಿರುತ್ತವೆ; ಅವುಗಳನ್ನೆಲ್ಲಾ ಸರಿಪಡಿಸಬೇಕು; ರಾಜ್ಯಮಟ್ಟದಲ್ಲಿ ಸುಮಾರು 500 ದೂರುಗಳು ಬಿಲ್ ಪಾವತಿಗೆ ಸಂಬಂಧಿಸಿದವುಗಳಾಗಿರುತ್ತವೆ; ಪ್ರಮುಖವಾಗಿ ಪಿ.ಡಿ.ಓ., ಡಿ.ಇ.ಒ., ತಾಂತ್ರಿಕ ಸಹಾಯಕರು/ಸಂಯೋಜಕರು, ಸಹಾಯಕ ನಿರ್ದೇಶಕರುಗಳು ಅವರವರಿಗೆ ವಹಿಸಿರುವ ಕೆಲಸಗಳನ್ನು ಜವಾಬ್ದಾರಿಯುತವಾಗಿ ಸಕಾಲದಲ್ಲಿ ಮಾಡಬೇಕಾಗುತ್ತದೆ; ಆಗ ಮಾತ್ರ ನರೇಗಾ ಯೋಜನೆಯಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

2013-14ನೇ ಸಾಲಿನಿಂದ ಜಿಲ್ಲೆಯಲ್ಲಿ 25 ಜನ ತಾಂತ್ರಿಕ ಸಂಯೋಜಕರು ಇದ್ದಾರೆ; ಆ ಸಾಲಿನಲ್ಲಿ ನರೇಗಾ ಅನುಷ್ಠಾನದಲ್ಲಿ ಬಹಳ ಹಗರಣಗಳಾಗಿರುವುದು ಕಂಡುಬಂದಿದೆ, ಕೂಲಿ ಪಾವತಿ ಮಾಡುವಲ್ಲಿ ವಿಳಂಭ; ಕೂಲಿಕಾರರಿಗೆ ಅವರು ಕೆಲಸ ಮಾಡಿದ 15ದಿವಸದೊಳಗೆ ಕೂಲಿ ಪಾವತಿಯಾಗಬೇಕು; ವೈಯಕ್ತಿಕ ಕಾಮಗಾರಿಗಳು ಆಗಿದ್ದರೂ ಎಂ.ಬಿ. ಬರೆದಿರುವುದಿಲ್ಲ, ಎನ್.ಎಂ.ಆರ್.ತೆಗೆದಿರುವುದಿಲ್ಲ ಎಂಬ ಇತ್ಯಾದಿ ದೂರುಗಳು ಬಂದಿರುತ್ತದೆ; ಇದಕ್ಕೆ ಕಾರಣ ಏನು ಎಂಬುದರ ಬಗ್ಗೆ ಪರಿಶೀಲಿಸಬೇಕಾಗುತ್ತದೆ ಎಂದು ತಿಳಿಸಿದರು. ತಮಗೆ ಈಗ ಸಕಾಲದಲ್ಲಿ ಸಂಭಾವನೆ ಪಾವತಿಯಾಗುತ್ತಿದೆ; ಹಾಜರಾತಿಗೆ ಶೇ.40 ಹಾಗೂ ಶೇ.60ರಷ್ಟು ತಾವು ಸಾಧಿಸಿರುವ ಕಾರ್ಯಗಳಿಗೆ ನೀಡುವಂತೆ ಮಾನ್ಯ ಆಯುಕ್ತರು, ಗ್ರಾ.ಅ.ಪಂ.ರಾಜ್ ಇಲಾಖೆರವರು ತಿಳಿಸಿರುತ್ತಾರೆ. ಒಂದೊಂದೆ ಕಾಮಗಾರಿಗೆ ಎಂ.ಬಿ. ಇಡುವುದು ಬೇಡ; ಐದೈದು ಮನೆಗಳ ಕಾಮಗಾರಿಗಳಿಗೆ ಒಂದು ಎಂ.ಬಿ.ಬಳಸುವಂತೆ ಸೂಚಿಸಲಾಯಿತು. ಮನೆಗಳ ಕಾಮಗಾರಿಗಳಿಗೆ e.M.B. Printout ತೆಗೆದು ಎಂ.ಬಿ. ಬರೆಯಲು ತಿಳಿಸುತ್ತಾ, ಪ್ರತಿವಾರ ಎಂ.ಬಿ.ಬರೆಯಬೇಕು; ಇನ್ನು 10ದಿವಸದಲ್ಲಿ 2ಲಕ್ಷ ಮಾನವ ದಿನ ಸೃಜನೆಯಾಗಬೇಕು; ಜಿಲ್ಲೆಯಲ್ಲಿ ಒಂದು ದಿನಕ್ಕೆ ಕನಿಷ್ಠ 20-25ಸಾವಿರ ಮಾನವದಿನ ಸೃಜನೆಯಾಗಬೇಕು ಎಂದು ತಿಳಿಸಲಾಯಿತು.

- ಏಪ್ರಿಲ್ ಮಾಹೆಯಲ್ಲಿ ಯಾವ ರೀತಿ ನರೇಗಾ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗಿರುತ್ತದೆ; ತಾವು ಎಷ್ಟು ಕಾಮಗಾರಿಗಳ ಅಂದಾಜುಪಟ್ಟಿ ಸಿದ್ಧಪಡಿಸಲಾಗಿದೆ, ಎಷ್ಟು ಎಂ.ಬಿ. ಬರೆಯಲಾಗಿದೆ, ಎಷ್ಟು ಸ್ಥಳ ಪರಿಶೀಲನೆ ಮಾಡಲಾಗಿದೆ, ಎಷ್ಟು ಮಾನವದಿನ ಸೃಜನೆ ಮಾಡಲಾಗಿದೆ ಎಂಬುದರ ಬಗ್ಗೆ ತಾವುಗಳು ಪ್ರತಿ ವಾರ ತಮ್ಮ ಪ್ರಗತಿಯ ವರದಿಯನ್ನು ಜಿ.ಪಂ.ಗೆ ಸಲ್ಲಿಸಲು ಸೂಚಿಸಿದರು. ಸಮುದಾಯಾಧಾರಿತ ಕಾಮಗಾರಿಗನ್ನು ಮೊದಲು ಜಿ.ಪಿ.ಎಸ್. ಮಾಡಬೇಕು, ಅಂದಾಜುಪಟ್ಟಿ ಅನುಮೋದನೆ ಆದ ಮೇಲೆ ಮಾರ್ಕ್‌ಔಟ್ ಕೊಡಲಾಗುತ್ತಿದೆ, ರೂ.3.00ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ತಾಂತ್ರಿಕ ಮಂಜೂರಾತಿ ನೀಡುತ್ತಾರೆ; ಹೊರಗುತ್ತಿಗೆ ತಾಂತ್ರಿಕ ಸಹಾಯಕರು ತಯಾರಿಸುವ ಅಂದಾಜುಪಟ್ಟಿಗಳನ್ನು ರ್‍ಯಾಂಡಂ ಆಗಿ ತಾವು ಚೆಕ್ ಮಾಡಬೇಕು; ಅಂದಾಜುಪಟ್ಟಿಯನ್ನು ಎ.ಇ.ಇ. ಪಂ.ರಾ.ಇಂ.ರವರು ಪರಿಶೀಲಿಸಿ ಜಿ.ಪಂ.ಗೆ ವರದಿ ನೀಡಬೇಕು; ಈ ವರ್ಷದಲ್ಲಿ ಶೇ.10ರಷ್ಟು ಅಂದಾಜುಪಟ್ಟಿಗಳನ್ನಾದರೂ ಪರಿಶೀಲನೆ ಮಾಡಿರುವ ಬಗ್ಗೆ ವರದಿ ನೀಡುವಂತೆ ತಿಳಿಸಿದರು. ಹಾಗೂ ರಿವಿಟ್‌ಮೆಂಟ್‌ನ್ನು ಒಳಗೊಂಡಂತೆ ಕೆರೆ ಮತ್ತು ಕಟ್ಟೆಗಳ ಅಂದಾಜುಪಟ್ಟಿಗಳನ್ನು ತಯಾರಿಸುವುದು; ಕೆಲವೆಡೆ 10 ವರ್ಷಗಳಿಂದ ಕೆರೆಗಳು ತುಂಬಿರುವುದಿಲ್ಲ; ಅದನ್ನು ಏಕೆ ಅಭಿವೃದ್ಧಿ ಪಡಿಸಲು ಮುಂದಾಗುತ್ತೀರಿ? ಎಂದು ಪ್ರಶ್ನಿಸಿದರು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್/ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ಇಲಾಖೆ)**

**ಸಂಭಾವನೆ ಪಾವತಿ ಬಗ್ಗೆ:**

ಸಕಾಲದಲ್ಲಿ ಸಿಬ್ಬಂದಿಗಳಿಗೆ ವೇತನ ನೀಡಲಾಗುತ್ತಿದೆಯೆ? ಎಂದು ಪ್ರಶ್ನಿಸಲಾಗಿ, ತುರುವೇಕೆರೆ ತಾಲ್ಲೂಕಿನಲ್ಲಿ 4 ಮಂದಿ ತಾಲ್ಲೂಕು ಸಂಯೋಜಕರಿಗೆ ಜೂನ್ ಮಾಹೆಯ ವೇತನ ಬಂದಿರುವುದಿಲ್ಲ; ಗುಬ್ಬಿ ತಾಲ್ಲೂಕಿನಲ್ಲಿ ಒಬ್ಬರಿಗೆ ರೂ.4,000/- ಕಡಿಮೆ ಬಂದಿರುತ್ತದೆ ಎಂದು ತಿಳಿಸಿದಾಗ ಉಪ ಕಾರ್ಯದರ್ಶಿ (ಅಭಿವೃದ್ಧಿ) ರವರು ಕೂಡಲೆ ಪಾಸ್‌ಬುಕ್ ಜೆರಾಕ್ಸ್ ಪ್ರತಿ ನೀಡುವಂತೆ ತಿಳಿಸಿದರು. ಸಿಬ್ಬಂದಿಗಳಿಗೆ ಸಕಾಲದಲ್ಲಿ ವೇತನ ಆಗುತ್ತಿದೆಯೋ, ಇಲ್ಲವೋ ಎಂಬುದನ್ನು ಸಹಾಯಕ ನಿರ್ದೇಶಕರು ಗಮನಿಸಬೇಕು, ಇದು ಅವರ ಜವಾಬ್ದಾರಿಯಾಗಿರುತ್ತದೆ; ಏನಾದರೂ ಸಮಸ್ಯೆಗಳಿದ್ದರೆ ಕೂಡಲೇ ಬಗೆಹರಿಸಲು ತಿಳಿಸಲಾಯಿತು. ಮಧುಗಿರಿ ತಾಲ್ಲೂಕಿನಲ್ಲಿ ಶ್ರೀ ಶಿವಣ್ಣ ಎಂಬುವರಿಗೆ ಜನವರಿ 2016ರಿಂದ ಸಂಭಾವನೆ ಪಾವತಿಯಾಗಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದಾಗ, ಮಧುಗಿರಿ ತಾ.ಪಂ.ನ ಸಹಾಯಕ ನಿರ್ದೇಶಕರನ್ನು ಪ್ರಶ್ನಿಸಲಾಗಿ, ಸಹಾಯಕ ನಿರ್ದೇಶಕರು, ಶ್ರೀ ಶಿವಣ್ಣನವರು ಸಂಬಳವಾಗದಿರುವ ಬಗ್ಗೆ ನನ್ನ ಗಮನಕ್ಕೂ ತಂದಿರುವುದಿಲ್ಲ; ಮನವಿಯನ್ನು ಸಹ ಈವರೆಗೆ ಕೊಟ್ಟಿರುವುದಿಲ್ಲ; ಆತ ಒಂದು ತಿಂಗಳು ಅನಧಿಕೃತವಾಗಿ ಗೈರು ಹಾಜರಾಗಿರುತ್ತಾರೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಅನಧಿಕೃತವಾಗಿ ಗೈರು ಹಾಜರಾಗಿದ್ದರೆ ಆ ಮಾಹೆಯ ಸಂಬಳ ಕಡಿತಗೊಳಿಸಲು ಇವರು ನಿರ್ವಹಿಸಿದ ಕೆಲಸಗಳ ಬಗ್ಗೆ ವಿವರಗಳನ್ನು ಜನವರಿ 2016ರಿಂದ ಪಡೆಯಲು ಸೂಚಿಸಿದರು. ಹಾಗೂ ತಾಲ್ಲೂಕು ಎಂ.ಐ.ಎಸ್.ಗಳು ತಾಲ್ಲೂಕುವಾರು ವಾಟ್ಸ್‌ಪ್ group ಮಾಡುವಂತೆ ತಿಳಿಸುತ್ತಾ, ಸಹಾಯಕ ನಿರ್ದೇಶಕರು ಮಾನಿಟರ್ ಮಾಡುವುದಕ್ಕೆ ತಿಳಿಸಿದರು. ಮುಂದುವರೆದು, ಹಾಜರಾತಿ ಪಟ್ಟಿ ಬಂದ ನಂತರ ಜಿ.ಪಂ.ನಲ್ಲಿ ವೇತನ ನೀಡಲು ಕ್ರಮವಹಿಸಲಾಗುತ್ತದೆ; ಜಿಲ್ಲೆಯಲ್ಲಿ 82 ಮಂದಿ ತಾಂತ್ರಿಕ ಸಹಾಯಕರಿದ್ದಾರೆ; ಅವರ ಡೇಟಾಬೇಸ್ ಇಟ್ಟುಕೊಳ್ಳುವಂತೆಯೂ ಹಾಗೂ ರೆಗ್ಯೂಲರ್ ಹಾಜರಾತಿ ಪಟ್ಟಿ ಪಡೆದು ಬಾಕಿ ಇರುವ ಎಲ್ಲವನ್ನು ಕ್ಲಿಯರ್ ಮಾಡಲು ತಿಳಿಸಿದರು. ಹಾಗೂ ತಾಂತ್ರಿಕ ಸಂಯೋಜಕರ ಕಾರ್ಯ-ವೈಖರಿ ಬಗ್ಗೆ ವರದಿ ಪಡೆಯುವಂತೆ ಸಹಾಯಕ ನಿರ್ದೇಶಕರುಗಳಿಗೆ ತಿಳಿಸಿದರು. ಮತ್ತು ಪಾವಗಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರುದ್ರೇಶ್ ಮತ್ತು ಶ್ರೀ ಶಿವರಾಮು, ತಾಂತ್ರಿಕ ಸಹಾಯಕರು, ಕೊರಟಗೆರೆ ಇವರನ್ನು ಕೆಲಸದಿಂದ ತೆಗೆದುಹಾಕಲು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸಹಾಯಕ ನಿರ್ದೇಶಕರು/ಕಾರ್ಯನಿರ್ವಾಹಕ ಅಧಿಕಾರಿ, ಕೊರಟಗೆರೆ ಇವರಿಗೆ ಸೂಚಿಸಿದರು.

ದಿನಾಂಕ:16-01-2017ರೊಳಗೆ Due N.M.R., Geo Tagging & P.F. ವಿವರಗಳನ್ನು ಸಲ್ಲಿಸಲು ತಿಳಿಸಿದರು.

ಸಭೆ ನಡೆದು ಒಂದು ದಿನದೊಳಗೆ ಸಭಾ ನಡವಳಿಯನ್ನು ಸಲ್ಲಿಸಲಾಗುವುದೆಂದು ಗುಬ್ಬಿ & ಕೊರಟಗೆರೆ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದ್ದರೂ ಈವರೆಗೂ ನಡವಳಿಯನ್ನು ಸಲ್ಲಿಸದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಕೂಡಲೇ ಸಭಾ ನಡವಳಿ ಸಲ್ಲಿಸಲು ತಿಳಿಸಿದರು.

ಮುಕ್ತಾಯವಾದ ಕಾಮಗಾರಿಗಳ ವರದಿಯನ್ನು ಹಾಗೂ ನರೇಗಾ ಕಾಮಗಾರಿಗಳ ಗ್ರಾಮ ಪಂಚಾಯತಿವಾರು 3 ವರ್ಷಗಳ ವಿವರವನ್ನು ದಿನಾಂಕ:16-01-2017ರೊಳಗೆ ಸಲ್ಲಿಸಲು ತಿಳಿಸಿದರು.

ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದ್ದರಿಂದ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯ ಮಾಡಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ತುಮಕೂರು.
19.1.17

**ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು.
2. ಜಿಲ್ಲಾ ಪಂಚಾಯತಿಯ ಎಲ್ಲಾ ಶಾಖಾ ಮುಖ್ಯಸ್ಥರುಗಳಿಗೆ.
3. ಕಾರ್ಯಪಾಲಕ ಅಭಿಯಂತರು, ಪಂ.ರಾ.ಇಂ.ವಿಭಾಗ, ತುಮಕೂರು/ಮಧುಗಿರಿ.
4. ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಕಳುಹಿಸುತ್ತಾ ಸಭೆಯಲ್ಲಿ ತಿಳಿಸಿರುವಂತೆ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಕೂಡಲೇ ಸಲ್ಲಿಸಲು ಸೂಚಿಸಿದೆ.
5. ಕಛೇರಿ ಪ್ರತಿ.